# ಆಹಾ ಸುದ್ದಿ!

★ ಸಸಿತೋಟ

ಉತ್ತಮ ನಡವಳಿಕೆಗೆ ಖರ್ಚೇನೂ ಮಾಡಬೇಕಾಗಿಲ್ಲ ಎಂದು ಯಾರಾದರೂ ಉಪದೇಶಿಸಬಹುದು. ಆದರೆ ಬ್ರಿಟನ್ನಿನಲ್ಲಿ ಅತೀ ವಿನಯವೇ ನಷ್ಟಕ್ಕೆ ಕಾರಣವಾಗಿದೆಯಂತೆ. 10ರಲ್ಲಿ 8 ಕಂಪೆನಿಗಳಲ್ಲಿ ನಷ್ಟಕ್ಕೆ ಇದೇ ಕಾರಣ ಎನ್ನುತ್ತದೆ ಸಮೀಕ್ಷೆ. ಗ್ರಾಹಕರು ಕಡಿಮೆ ಹಣ ಸಂದಾಯ ಮಾಡಿದರೂ ಕಿವಿಯಿಂದ ಕಿವಿಯವರೆಗೆ ಹಲ್ಲು ಕಿರಿದು ಪಾವತಿ ಹರಿದು ಕೊಡುವುದು, ಉದ್ಯೋಗಿ ತಡವಾಗಿ ಬಂದರೂ, ನಮ್ರತೆಯಿಂದ 'ಮನೆಯವರಿಗೆ ಆರಾಮವಿಲ್ಲವೇ' ಎಂದು ಬಾಸ್ ತಾನೇ ಕೇಳಿಬಿಡುವುದು.. ಇತ್ಯಾದಿ. ತಡವಾಗಿ ಕಚೇರಿಗೆ ಹೋಗುವಾಗ ನೆವ ಹುಡುಕುವ ಸೃಜನಶೀಲತೆಯ ಅಗತ್ಯವೂ ಇಲ್ಲ, ಅಲ್ಲವೇ!



ಫ್ಲಾರೆನ್ಸ್‌ನಲ್ಲಿ ನಡೆದ ಐತಿಹಾಸಿಕ ಫುಟ್ಬಾಲ್‌ನ ವಾರ್ಷಿಕ ಪಂದ್ಯಾವಳಿಯ ಅಂತಿಮ ಪಂದ್ಯದಲ್ಲಿ ಭಾರಿ ಹಣಾಹಣಿಯೇ ನಡೆಯಿತು. 1580ರಿಂದ ಈ ಪಂದ್ಯಾವಳಿ ನಡೆದುಕೊಂಡು ಬಂದಿದೆಯಂತೆ. ಮರಳಿನ ಮೇಲೆ ನಡೆಯುವ ಪಂದ್ಯದಲ್ಲಿ ಆಟಗಾರರು ಕಾಲಿನ ಜೊತೆ ಕೈಗಳನ್ನೂ ಬಳಸಬಹುದಂತೆ. ಆಟಗಾರರು ಫುಟ್ಬಾಲ್ ಒಂದನ್ನು ಬಿಟ್ಟು ಉಳಿದಂತೆ ಆ ನಿಯಮವನ್ನು ಚೆನ್ನಾಗೇ ಬಳಸಿಕೊಂಡರು.



ಸೈಬೀರಿಯಾದ ಪಟ್ಟಣವೊಂದರಲ್ಲಿ ನಡೆದ ಮದುವೆಯಾದ ಹೆಂಗಳೆಯರ ವಾರ್ಷಿಕ ಮೆರವಣಿಗೆಯಲ್ಲಿ ಮದುವಣಗಿತ್ತಿ ದಿರಿಸು ಧರಿಸಿದ ಯುವತಿಯರು ಶಾಂಪೇನ್ ಸೇವಿಸಿ ಸಂತಸ ಹಂಚಿಕೊಂಡರಂತೆ. ಮದುವೆಯ ದಿನದ ಖುಷಿಯ ಅನುಭವವನ್ನು ನೆನಪಿಸಿಕೊಳ್ಳಲು ಈ ರೀತಿಯ ಮೆರವಣಿಗೆ ಏರ್ಪಡಿಸುವ ಸಂಪ್ರದಾಯ ಅಲ್ಲಿದೆಯಂತೆ. ವಿವಾಹಿತ ಪುರುಷರಿಗೆ ಇಂತಹ ಮೆರವಣಿಗೆ ಯಾಕಿಲ್ಲ ಎಂದು ಲಿಂಗ ಸಮಾನತೆ ಪ್ರತಿಪಾದಿಸುವವರು ಅಲವತ್ತುಕೊಳ್ಳಬಹುದು. ಮೆಲುಕು ಹಾಕಲು ವಿವಾಹಿತ ಪುರುಷರಿಗೆ ಖುಷಿಯ ಅನುಭವ ಇರಬೇಕಲ್ಲವೇ!

ಕೆನಡಾದ ಪೊಲೀಸ್ ಇಲಾಖೆ ಸಾರ್ವಜನಿಕರ ಕ್ಷಮೆ ಕೇಳಿದೆಯಂತೆ. ಯಾರೋ ತಪ್ಪು ಮಾಡದ ವ್ಯಕ್ತಿಯನ್ನು ಬಂಧಿಸಿದ್ದಕ್ಕಲ್ಲ, ಇಲಾಖೆಯ ಹೆಲಿಕಾಪ್ಟರ್‌ನಲ್ಲಿ ಹಾರಾಡುತ್ತಿದ್ದ ಇಬ್ಬರು ಪೊಲೀಸ್ ಅಧಿಕಾರಿಗಳ ಸಂಭಾಷಣೆಯನ್ನು ರಸ್ತೆಗಳಲ್ಲಿ ಸಂಚರಿಸುತ್ತಿದ್ದ ಪೊಲೀಸ್ ವಾಹನದ ಧ್ವನಿವರ್ಧಕದಲ್ಲಿ ಬಿತ್ತರಿಸಿದ್ದಕ್ಕೆ. ಬಯಲಾಗಿದ್ದು ಯಾವುದೋ ಅಂತರ್‌ರಾಷ್ಟ್ರೀಯ ಭಯೋತ್ಪಾದಕರ ಕುರಿತ ರಹಸ್ಯ ಕಾರ್ಯಾಚರಣೆಯೇನೂ ಅಲ್ಲ, ಬದಲಾಗಿ ಮಲಗುವ ಮನೆಯ ಖಾಸಗಿ ವಿಷಯಗಳು. ಅಲ್ಲಿಯ ಶಾಲೆಗಳಲ್ಲಿ ಲೈಂಗಿಕ ಶಿಕ್ಷಣ ನೀಡಲು ಪೊಲೀಸರ ನೆರವನ್ನೂ ಪಡೆಯಬಹುದು ಎಂದು ಈ ರೀತಿ ಡಂಗುರ ಸಾರಬಾರದಿತ್ತು.



ಬರ್ಲಿನ್‌ನಲ್ಲಿ ಫ್ರೈಡ್‌ರಿಚ್‌ಸ್ಟ್ಯಾಡ್ ಡಾನ್ಸ್ ಕಂಪೆನಿಯ ನರ್ತಕರು ಇದ್ದಕ್ಕಿದ್ದಂತೆ ರೈಲು ನಿಲ್ದಾಣದಲ್ಲಿ ಕುಣಿಯತೊಡಗಿದಾಗ ಪ್ರಯಾಣಿಕರು ಬೆಚ್ಚಿಬಿದ್ದರಂತೆ. ಆ ಕಂಪೆನಿ ಕಳೆದ 95 ವರ್ಷಗಳ ಇತಿಹಾಸದಲ್ಲೇ ಈ ನೃತ್ಯಕ್ಕೆ ಅತ್ಯಂತ ಹೆಚ್ಚು ಅಂದರೆ 13.5 ದಶಲಕ್ಷ ಡಾಲರ್ ವ್ಯಯಿಸಿದೆಯಂತೆ. ಇಷ್ಟೊಂದು ಹಣ ವ್ಯಯ ಮಾಡಿದ್ದಾರೆಂದು ಗೊತ್ತಾದರೆ ನೃತ್ಯ ನೋಡದವರೂ ಬೆಚ್ಚಿ ಬೀಳಬಹುದು.

ಜಪಾನಿನ ನಗೋಯ ಮೃಗಾಲಯದಲ್ಲಿರುವ ಶಬಾನಿ ಹೆಸರಿನ ಈ ಗಂಡು ಗೊರಿಲ್ಲಾದಿಂದಾಗಿ ಮೃಗಾಲಯಕ್ಕೆ ನೂಕುನುಗ್ಗಲಂತೆ. ಅದರಲ್ಲೂ ಯುವತಿಯರ ಸಂಖ್ಯೆಯೇ ಜಾಸ್ತಿಯಂತೆ. ಕಾಮನೆ ಕೆರಳಿಸುವ ದೈಹಿಕ ನಿಲುವು, ಉಬ್ಬಿದ ಸ್ನಾಯುಗಳು.. ಎಂದೆಲ್ಲ ಯಾರೋ ಅಂತರ್ಜಾಲದಲ್ಲಿ ಹೊಗಳಿದ್ದು ನೋಡಿ ಈ ರೀತಿ ಮುಗಿಬೀಳುತ್ತಿದ್ದಾರಂತೆ. ಆದರೇನು ಮಾಡುವುದು, ಈ ಸೊಗಸುಗಾರನಿಗೆ ಈಗಾಗಲೇ ಇಬ್ಬರು ಪತ್ನಿಯರಿದ್ದಾರಂತೆ!

